ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು-560 009)

**ಸಂಖ್ಯೆ: ಕವಿಪ್ರನಿನಿ/ಬಿ16/5607/2000-01 (ಎ)** **ದಿನಾಂಕ:** 26 AUG 2019

ಅಧೀಕ್ಷಕ ಇಂಜಿನಿಯರ್(ವಿ.),
ಕಾರ್ಯ ಮತ್ತು ಪಾಲನಾ ವೃತ್ತ,
**ಬೆಸ್ಕಾಂ**-ಬೆಂಗಳೂರು (ದಕ್ಷಿಣ)/ ರಾಮನಗರ/ ತುಮಕೂರು/ ದಾವಣಗೆರೆ/ ಕೋಲಾರ.
**ಸೆಸ್ಕ್**-ಮೈಸೂರು/ ಮಂಡ್ಯ/ ಹಾಸನ/ ಚಾಮರಾಜನಗರ-ಕೊಡಗು.
**ಮೆಸ್ಕಾಂ**-ಮಂಗಳೂರು/ ಉಡುಪಿ/ ಶಿವಮೊಗ್ಗ/ ಚಿಕ್ಕಮಗಳೂರು.
**ಹೆಸ್ಕಾಂ**-ಹುಬ್ಬಳ್ಳಿ/ ಹಾವೇರಿ/ ಶಿರಸಿ/ ಬೆಳಗಾವಿ/ ಚಿಕ್ಕೋಡಿ/ ವಿಜಯಪುರ/ ಬಾಗಲಕೋಟೆ.
**ಜೆಸ್ಕಾಂ**-ಗುಲ್ಬರ್ಗಾ/ ಬೀದರ್/ ರಾಯಚೂರು/ ಬಳ್ಳಾರಿ/ ಕೊಪ್ಪಳ.

ಮಾನ್ಯರೇ,

**ವಿಷಯ :** ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ಸಹಾಯಕ ಉಗ್ರಾಣ ಪಾಲಕರ ಹುದ್ದೆಯಿಂದ **ಶೇ.35ರ** ಕೋಟಾದಲ್ಲಿ ಕಿರಿಯ ಇಂಜಿನಿಯರ್ (ವಿ.) ಹುದ್ದೆಗಳನ್ನು ಭರ್ತಿ ಮಾಡಲು ಕವಿಮಂ ನೌಕರಿ ಭರ್ತಿ ಹಾಗೂ ಬಡತಿ ನಿಯಮಾವಳಿಗಳಿಗೆ ತಿದ್ದುಪಡಿ ಮಾಡುವ ಬಗ್ಗೆ.

**ಉಲ್ಲೇಖ :** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ರಿ.ನಂ.659), ಬೆಂಗಳೂರು ಇವರ ಪತ್ರ ಸಂಖ್ಯೆ ಕವಿಪ್ರನಿನೌಸಂ/104/19-20 ದಿನಾಂಕ: **19.6.2019.**

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸಬಯಸುವುದೇನೆಂದರೆ, ಹಾಲಿ ಚಾಲ್ತಿಯಲ್ಲಿರುವ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಯಲ್ಲಿ, ಕಿರಿಯ ಇಂಜಿನಿಯರ್ (ವಿ) ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲು ಅಧ್ಯಾಯ-6 ರ ಕ್ರಮ ಸಂಖ್ಯೆ: **12 ಬಿ(ii)** ರಲ್ಲಿ ಈ ಕೆಳಗಿನಂತೆ ಅವಕಾಶವಿರುತ್ತದೆ:-

i) **ಶೇ.17.5** ರಷ್ಟು ಹುದ್ದೆಗಳನ್ನು, ಡಿಪ್ಲೊಮಾ/ಐಟಿಸಿ ವಿದ್ಯಾರ್ಹತೆ ಹೊಂದಿರುವ ತಾಂತ್ರಿಕ ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ ಸಹಾಯಕ ಉಗ್ರಾಣ ಪಾಲಕರುಗಳ ಬಡ್ತಿಯಿಂದ

ii) **ಶೇ.17.5** ರಷ್ಟು ಹುದ್ದೆಗಳನ್ನು ತಾಂತ್ರಿಕ ಅರ್ಹತೆ ಹೊಂದಿರದ, ನಿಗಮದಿಂದ ನಡೆಸಲಾಗುವ ತರಬೇತಿಯನ್ನು ಪಡೆದು ತರಬೇತಿ ಕೊನೆಯಲ್ಲಿನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ತಾಂತ್ರಿಕವಲ್ಲದ ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ ಸಹಾಯಕ ಉಗ್ರಾಣ ಪಾಲಕರ ಜೇಷ್ಠತೆ ಮತ್ತು ಯೋಗ್ಯತೆ ಆಧಾರದ ಮೇಲೆ ಬಡ್ತಿಯಿಂದ.

ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ರಿ.ನಂ.659), ಬೆಂಗಳೂರು ಇವರು ಉಲ್ಲೇಖದಲ್ಲಿನ ತಮ್ಮ ಪತ್ರದಲ್ಲಿ, ಸುಮಾರು 20 ವರ್ಷಗಳಿಂದ ಓವರ್‌ಸೀಯರ್/ಮಾಪಕ ಓದುಗ/ ಆಪರೇಟರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡದೇ ಇರುವುದರಿಂದ, ಕಿರಿಯ ಇಂಜಿನಿಯರ್ (ವಿ) ಹುದ್ದೆಯ ಬಡ್ತಿಗೆ ಮೀಸಲಿಟ್ಟಿರುವ **ಶೇ.17.5** ರ ತಾಂತ್ರಿಕ

ಕೋಟಾದಡಿಯಲ್ಲಿ ಅರ್ಹ ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ಸಹಾಯಕ ಉಗ್ರಾಣ ಪಾಲಕರು, ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಬಡ್ತಿ ಹೊಂದಲು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು ತಾಂತ್ರಿಕವಲ್ಲದ ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ಸಹಾಯಕ ಉಗ್ರಾಣ ಪಾಲಕರ ಹುದ್ದೆಯ ಬಡ್ತಿಗೆ ಅರ್ಹರಿರುವ ನೌಕರರ ಸಂಖ್ಯೆ ಹೆಚ್ಚಾಗಿರುವುದರಿಂದ, ಇವರಿಗೆ ಕಿರಿಯ ಇಂಜಿನಿಯರ್ (ವಿ) ಹುದ್ದೆಗೆ ಬಡ್ತಿ ನೀಡುವ ದೃಷ್ಟಿಯಿಂದ ತಾಂತ್ರಿಕ ಕೋಟಾದಡಿಯಲ್ಲಿ ನಿಗದಿಪಡಿಸಿರುವ **ಶೇ.17.5** ರಷ್ಟು ಪ್ರಮಾಣವನ್ನು **ಶೇ.5ಕ್ಕೆ** ಕಡಿತಗೊಳಿಸಿ, ತಾಂತ್ರಿಕ ಅರ್ಹತೆ ಹೊಂದಿರದ ಕೋಟಾದಡಿಯಲ್ಲಿ ನಿಗದಿಪಡಿಸಿರುವ **ಶೇ.17.5** ರಷ್ಟು ಪ್ರಮಾಣವನ್ನು, **ಶೇ.30** ಕ್ಕೆ ಹೆಚ್ಚಿಸುವಂತೆ ಕೋರಿರುತ್ತಾರೆ.

ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ರಿ.ನಂ.659), ಬೆಂಗಳೂರು ಇವರ ಕೋರಿಕೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಮುಂದಿನ ಕ್ರಮವಹಿಸಲು, ಇದರ ಸಾಧಕ ಭಾದಕಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ನೀಡುವುದರ ಜೊತೆಗೆ, ತಮ್ಮ ವೃತ್ತಕ್ಕೆ ಸಂಬಂಧಿಸಿದಂತೆ, ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ನಮೂನೆಯಲ್ಲಿ ವಿವರಗಳನ್ನು, **7 ದಿನಗಳ** ಒಳಗಾಗಿ ಈ ಕಚೇರಿಗೆ ಸಲ್ಲಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

26/08

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

ಪ್ರತಿ ಮಾಹಿತಿಗಾಗಿ :-

1. ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಕಂಪನಿ ಕಾರ್ಯಾಲಯ, ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ.
2. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂ.ಸಂ.659), ಬೆಂಗಳೂರು.

**'ಅನುಬಂಧ'**

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

| ಹುದ್ದೆಯ ಹೆಸರು | ಶೇ.17.5 ರ ತಾಂತ್ರಿಕ ಕೋಟಾದಡಿಯಲ್ಲಿ ಕಿರಿಯ ಇಂಜಿನಿಯರ್ ಹುದ್ದೆಗೆ ಬಡ್ತಿ ಹೊಂದಲು ಅರ್ಹತೆ ಹೊಂದಿರುವವರ ಸಂಖ್ಯೆ<br><br>(ಡಿಪ್ಲೊಮಾ/ಐಟಿಸಿ/ಐಟಿಐ ವಿದ್ಯಾರ್ಹತೆಯೊಂದಿಗೆ ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗಳಿಗೆ ನೇರ ನೇಮಕಾತಿಗೊಂಡ ನೌಕರರು)<br>(ಜುಲೈ–2019 ರ ಅಂತ್ಯಕ್ಕೆ) | ಶೇ.17.5 ರ ತಾಂತ್ರಿಕವಲ್ಲದ ಕೋಟಾದಡಿಯಲ್ಲಿ ಕಿರಿಯ ಇಂಜಿನಿಯರ್ ಹುದ್ದೆಗೆ ಬಡ್ತಿ ಹೊಂದಲು ಅರ್ಹತೆ ಹೊಂದಿರುವವರ ಸಂಖ್ಯೆ<br><br>(ನಿರ್ವಹಣಾ ಹುದ್ದೆಗಳಿಂದ ಓವರ್‌ಸೀಯರ್/ಮಾಪಕ ಓದುಗ/ಆಪರೇಟರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗೆ ಬಡ್ತಿ ಹೊಂದಿದ ನೌಕರರು)<br>(ಜುಲೈ–2019 ರ ಅಂತ್ಯಕ್ಕೆ) |
|---|---|---|
| ಓವರ್‌ಸೀಯರ್/ ಮಾಪಕ ಓದುಗ/ ಆಪರೇಟರ್/ಸಹಾಯಕ ಉಗ್ರಾಣ ಪಾಲಕ | | |

| ಹುದ್ದೆಯ ಹೆಸರು | ಶೇ.17.5 ರ ತಾಂತ್ರಿಕ ಕೋಟಾದಡಿಯಲ್ಲಿ ಬಡ್ತಿಗಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆ (ಜುಲೈ–2019 ರ ಅಂತ್ಯಕ್ಕೆ) | | | ಶೇ.17.5 ರ ತಾಂತ್ರಿಕವಲ್ಲದ ಕೋಟಾದಡಿಯಲ್ಲಿ ಬಡ್ತಿಗಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆ (ಜುಲೈ–2019 ರ ಅಂತ್ಯಕ್ಕೆ) | | |
|---|---|---|---|---|---|---|
| | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಖಾಲಿ ಹುದ್ದೆಗಳು | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಖಾಲಿ ಹುದ್ದೆಗಳು |
| ಕಿರಿಯ ಇಂಜಿನಿಯರ್ (ವಿ.)/ ಉಗ್ರಾಣ ಪಾಲಕ ದರ್ಜೆ–2 | | | | | | |

-------------------